**ದಿನಾಂಕಃ 23-07-2024** **CC 1041/2022 (ಪಿ.ಡಬ್ಲು. 2)**

**ಇಂದು ದಿನಾಂಕಃ 23-07-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ ಜೆಡ್.ಹೆಚ್.ಟಿ. ವಕೀಲರಿಂದಃ-**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲಿಸರು ನನಗೆ ವಿಚಾರಣೆ ಮಾಡಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿ. ಆರೋಪಿಯ ತಪ್ಪಿ ನಿಂದ ಘಟನೆ ಆಗಿಲ್ಲ ಎಂದರೆ ಸಾಕ್ಷಿ ಜೆಸ್ಕಾಂ ರವರ ತಪ್ಪಿನಿಂದ ಆಗಿದೆ ಎಂದು ನುಡಿಯುತ್ತಾರೆ.

ಊರಿನಿಂದ ಘಟನಾ ಸ್ಥಳ 2 ಕಿ.ಮಿ. ದೂರದಲ್ಲಿದೆ ಎಂದರೆ ಸಾಕ್ಷಿ 1 ಕಿ.ಮಿ. ದೂರದಲ್ಲಿದೆ ಎಂದು ನುಡಿಯುತ್ತಾರೆ. ಸದರಿ ಹೊಲಕ್ಕೆ ನಾನು ಘಟನೆಯ ಮೊದಲು 2-3 ಬಾರಿ ಹೋಗಿದ್ದೆ. ಯಾವ ದಿನಾಂಕದಂದು ನಾನು ಹೋಗಿದ್ದೆ ಎಂದು ನೆನಪಿಲ್ಲ. ಸದರಿ ಹೊಲದ ಹಿಂದೆ 10-12 ಕಂಬವಾದ ನಂತರ ಒಂದು ಟಿ.ಸಿ. ಇದೆ ಎಂದರೆ ಸರಿ. ಸದರಿ ಟಿ.ಸಿ. ಯಿಂದ 7 ರಿಂದ 8 ಕಂಬವಾದ ನಂತರ ಒಂದು ಕಟ ಪಾಯಿಂಟ ಇದೆ ಎಂದರೆ ನಾನು ಅಷ್ಟೊಂದು ಗಮನಿಸಿಲ್ಲ ಎಂದು ನುಡಿಯುತ್ತಾರೆ.

ಈಗ 5-6 ವರ್ಷಗಳ ಹಿಂದೆ ಸದರಿ ಕಟ ಪಾಯಿಂಟದಿಂದ ಘಟನಾ ಸ್ಥಳದಲ್ಲಿರುವ ವಿದ್ಯುತ ವೈಯರಗಳಿಗೆ ವಿದ್ಯುತ ಸರಬರಾಜು ಇರಲಿಲ್ಲ ಎಂದರೆ ಸರಿ. ಆರೋಪಿಗೆ ನಾನು ವೈಯಕ್ತಿಕವಾಗಿ ಭೇಟಿಯಾಗಿ ಯಾವುದೇ ವಿಷಯ ತಿಳಿಸಿರಲಿಲ್ಲ ಎಂದರೆ ಸರಿ. ಘಟನೆಯಾದ ಸ್ಥಳದಿಂದ 6-7 ಕಂಬಗಳ ನಂತರ ಭಾವಿ ಇದೆ ಎಂದರೆ ಸರಿ. ಸದರಿ ಭಾವಿಯ ಅಕ್ಕ ಪಕ್ಕದಲ್ಲಿ ಉಳಾಗಡ್ಡಿ ಬೆಳೆ ಇತ್ತು ಎಂದರೆ ಸರಿ. ರಾಜಶೇಖರ ರವರ ಹತ್ತಿರ ಪ್ರಾ.ಸಾ. 1 ರವರು ಸದರಿ ಜಮೀನನ್ನು ಕಡತಿ ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ.

ಘಟನೆಯಾದ ದಿನದಂದು ನಾನು ಮುಕ್ರಾಂಬಾ ಗ್ರಾಮದಲ್ಲಿದ್ದೆ. ಘಟನಾ ಸ್ಥಳಕ್ಕೆ ನಾನು ಹೋದಾಗ ಮದ್ಯಾಹ್ನ 3-30 ರಿಂದ 4 ಗಂಟೆ ಆಗಿತ್ತು. ಘಟನಾ ಸ್ಥಳಕ್ಕೆ ಹೋದಾಗ ಮೃತಪಟ್ಟ ವ್ಯಕ್ತಿಯ ತಾಯಿ ಮತ್ತು ಊರಿನ 10-15 ಜನರು ಇದ್ದರು. ನಾನು ಸ್ಥಳಕ್ಕೆ ಹೋದಾಗ ಮೃತದೇಹ ಬದುವಿನ 10 ರಿಂದ 15 ಫೀಟ ಅಂತರದಲ್ಲಿ ಹಾಕಿದ್ದರು. ನಾನು ಘಟನೆ ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಘಟನೆಯ ಬಗ್ಗೆ ವಿಜಯಕುಮಾರ ಎಂಬುವವರು ನನಗೆ ಕರೆಮಾಡಿ ತಿಳಿಸಿದಾಗ ನಾನು ಸ್ಥಳಕ್ಕೆ ಹೋಗಿರುತ್ತೇನೆ. ಅಲ್ಲಿದ್ದ ವೈಯರಿಗೆ ಮೃತನ ಚರ್ಮ ಅಥವಾ ಬಟ್ಟೆ ಅಂಟಿತ್ತಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಅಂಟಿತ್ತು ಎಂದು ನುಡಿಯುತ್ತಾರೆ.

ಮೃತ ವ್ಯಕ್ತಿಗೆ ಸದರಿ ಸ್ಥಳದಲ್ಲಿ ಯಾವುದೇ ಘಟನೆ ಆಗಿಲ್ಲ ಮತ್ತು ಮೃತ ವ್ಯಕ್ತಿಗೆ ಬೇರೊಂದು ಸ್ಥಳದಲ್ಲಿ ವಿದ್ಯುತ ತಗಲಿದ್ದು ಅವನ ಶವವನ್ನು ಘಟನಾ ಸ್ಥಳದಲ್ಲಿ ವೈಯರ ಜೋತು ಬಿದ್ದ ಕಾರಣ ಅಲ್ಲಿ ಅವನ ಶವವನ್ನು ಇಟ್ಟು ಸುಳ್ಳು ಕತೆ ಕಟ್ಟಿ ಪರಿಹಾರ ಹಣ ಪಡೆಯಲು ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೈಯರಿಗೆ ಮೃತನ ಬಟ್ಟೆ ಮತ್ತು ಚರ್ಮ ಹತ್ತಿರುವ ಬಗ್ಗೆ ಪೋಲಿಸರಿಗೆ ಹೇಳಿಲ್ಲ ಮತ್ತು ಮೊಟ್ಟ ಮೊದಲನೆ ಬಾರಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ನಾನು ಊರಿನಲ್ಲಿದ್ದಾಗ ವಿಜಯಕುಮಾರ ರವರು ನನಗೆ ಕರೆಮಾಡಿ ಘಟನೆಯ ಬಗ್ಗೆ ತಿಳಿಸಿದ್ದು ಪೋಲಿಸರಿಗೆ ಹೇಳಿಲ್ಲ ಮತ್ತು ಮೊಟ್ಟ ಮೊದಲನೆ ಬಾರಿ ನ್ಯಾಯಾಲಯದಲ್ಲಿ

ಹೇಳುತ್ತಿದ್ದೇನೆ ಎಂದರೆ ಸರಿ. ಪ್ರಾ.ಸಾ. 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಮತ್ತು ನನ್ನ ಮುಖ್ಯವಿಚಾರಣೆಯಲ್ಲಿ ಆರೋಪಿಯ ವಿರುದ್ದ ನೀಡಿದ ಹೇಳಿಕೆಗಳೆಲ್ಲ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**